ಅ.ದಾ. ನಂಃ 42-2013 ಪಿಡಬ್ಲೂಃ 1

| | |
|---|---|
| ಸಾಕ್ಷಿಯ ಹೆಸರುಃ | ಸಣ್ಣಮ್ಮಾ ಕೋಂ ಮನೋಹರ ಗುರವ |

ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕಃ 28-6-2016

ಮುಂದುವರೆದ ಪಾಟೀ ಸವಾಲುಃ- ಶ್ರೀ ಕೆ ಆರ್ ಡಿ ವಕೀಲರಿಂದಃ-

ನನ್ನ ತಾಯಿ ತಂದೆಯವರ ಊರು ನಾಡುಮಾಸ್ಕೇರಿ ಕುಮಟಾ ತಾಲೂಕು. ನಾವು ನಾಡವರ ಜಾತಿಗೆ ಸೇರಿದವರು ಎಂದರೆ ಸರಿ. ನನ್ನ ಗಂಡನ ಮನೆಯವರು ದೇವಳಿ ಜಾತಿಗೆ ಸಂಬಂಧಪಟ್ಟವರು ಎಂದರೆ ಸರಿ. ನನ್ನ ಮದುವೆ ಅಂತರ್ಜಾತಿ ವಿವಾಹ ಎಂದರೆ ಸರಿ. ನಾನು ಶಿಕ್ಷಕಿ ಎಂದು ದಿಃ 31-5-1985 ರಂದು ಸೇವೆಗೆ ಸೇರಿಕೊಂಡಿರುತ್ತೇನೆ. ನಾನು ಸಿದ್ದಾಪುರ ತಾಲೂಕಿನ ಬೆಳೆಗೋಡು, ಹಳಲುಕೊಟ್ಟ, ಹಸೂರುಗಳಲ್ಲಿ ಸೇವೆ ಸಲ್ಲಿಸಿದ್ದೇನು. ನಾನು 2012 ರಲ್ಲಿ ಸೇವೆಯಿಂದ ನಿವೃತ್ತಿ ಹೊಂದಿರುತ್ತೇನೆ. ನಾನು ಕುಮಟಾ ತಾಲೂಕಿನ ಹೊಸಗೇರಿ ಕಡಿಮೆ ಹಾಗೂ ಹೊಸನಗರಗಳಲ್ಲಿ ಸಹ ಸೇವೆ ಸಲ್ಲಿಸಿರುತ್ತೇನೆ. ನಾನು ಸೇವೆ ಸಲ್ಲಿಸುವಾಗ ಆಯಾ ಊರುಗಳಲ್ಲಿ ವಾಸವಾಗಿದ್ದೇನೆಂದರೆ ಸರಿ. ಸಾಕ್ಷಿ ರಜಾ ದಿನಗಳಲ್ಲಿ ಮತ್ತು ಹಬ್ಬದ ದಿನಗಳಲ್ಲಿ ಸಿದ್ದರ ಊರಿಗೆ ಬರುತ್ತಿದ್ದೆ. ಸಿದ್ದರನಲ್ಲಿ ವಾಸವಾಗಿದ್ದ ಬಗ್ಗೆ ನನ್ನ ಹತ್ತಿರ ಯಾವುದೇ ದಾಖಲೆಗಳಿಲ್ಲ. ನನ್ನ ಪ್ರಮಾಣ ಪತ್ರದಲ್ಲಿ ನಾನು ಸಿದ್ದರದಲ್ಲಿ ವಾಸವಾಗಿ ಜಮೀನನ್ನು ಸಾಗುವಳಿ ಮಾಡಿದ್ದೆನಂದು ಸುಳ್ಳು ಹೇಳಿ ಬರೆಸಿದ್ದೇನೆಂದರೆ ಸರಿಯಲ್ಲ. ದಾವಾ ಜಮೀನಿನ ಸರ್ವೆ ನಂ. ಹೇಳಲು ಬರುತ್ತದೆ ಎನ್ನುವ ಪ್ರಶ್ನೆಗೆ ಸಾಕ್ಷಿ 158 ಮನೆ ಇರುವ ಜಾಗ. ಹಾಗೂ 159 ಜಮೀನಿನ ಜಾಗ ಎಂದು ಉತ್ತರಿಸುತ್ತಾರೆ. ದಾವಾ ಜಮೀನಿನ ಸುತ್ತ ಮುತ್ತ ಯಾರ್‍ಯಾರ ಜಮೀನುಗಳಿವೆ ಎಂದು ಹೇಳಲು ನನಗೆ ಬರುವುದಿಲ್ಲ. ನಾನು ವಾಸವಾಗಿದ್ದೆ ಅಂತ ಹೇಳುವ ಸಿದ್ದರ ಗ್ರಾಮದ ಮನೆಯ ಸುತ್ತಮುತ್ತ ಮನೆಯ ಪಶ್ಚಿಮಕ್ಕೆ ಬಯಲಿದೆ. ಪೂರ್ವಕ್ಕೆ ಮಹಾನಂದ ಮಾವಸಿ ಮನೆ ಇದೆ. ಪಶ್ಚಿಮಕ್ಕೆ ದೇವಿದಾಸನ ಮನೆ ಇದೆ. ದಕ್ಷಿಣಕ್ಕೆ ನರಸಿಂಹ ದೇವಸ್ಥಾನವಿದೆ. ಉತ್ತರಕ್ಕೆ ಬಯಲಿದೆ. ನನಗೆ ದಾವಾ ಜಮೀನಿನ ಬಗ್ಗೆಯೂಗಲೀ ಅದರ ಚೆಕ್‌ಬಂದಿಗಳ ಬಗ್ಗೆಯಾಗಲೀ ಯುಾವುದೆ ಮಾಹಿತಿ ಇಲ್ಲಾ ಎಂದರೆ ಸರಿಯಲ್ಲ.

ನನ್ನ ಗಂಡ ಮನೋಹರ 1973 ರಲ್ಲಿ ವಪೊಲಿಸರ ಇಲಾಖೆಗೆ ಸೇರಿದ್ದರು. ಆಗ ಅವರಿಗೆ 22 ವರ್ಷ ವಯಸ್ಸಾಗಿತ್ತು ಎಂದರೆ ಸರಿ. ಎರಡನೇ ಪ್ರತಿವಾದಿ ನನ್ನ ಗಂಡನಗಿಂತಲೂ ಚಿಕ್ಕವಳು. ಅವರಿಗಿಂತ 5 ವರ್ಷ ಚಿಕ್ಕವಳು.

**(ಈಗ ನ್ಯಾಯಾಲಯದ ಸಮವಾಗಿದ್ದರಿಂದ ಪಾಟಿ ಸವಾಲನ್ನು ಮಧ್ಯಾಹ್ನ 3 ಗಂಟೆಗೆ ಇಡಲಾಗಿದೆ.)**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕೀಕೃತ ಮಾಡಿಸಲಾಯಿತು.)

ಓ. ಹೇ. ಕೇ. ಸರಿ ಇದೆ.

ಸಿವಿಲ್ ಜಡ್ಜ ಕಾರವಾರ